# ನಾಡೀ ಪ್ರಕರಣ ಸಂಧಿ

ಹರಿಕಥಾಮ್ಇತಸಾರ ಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮ ಭಗವದ್ಭಕ್ತರಿದನಾದರದಿ ಕೇಳುವುದು

ವಾಸುದೇವನು ಪ್ರಾಣಮುಖತ
ತ್ವೇಶರಿಂದಲಿ ಸೇವೆ ಕೈಕೊಳು
ತೀ ಶರೀರದೊಳಿಪ್ಪ ಮೂವತ್ತಾರು ಸಾಹಸ್ರ
ಈ ಸುನಾಡಿಗಳೊಳಗೆ ಶ್ರೀ ಭೂ
ಮೀ ಸಮೇತ ವಿಹಾರಗೈವ ಪ
ರೇಶನಮಲಸುಮುತಿಗಳ ಚಿಂತಿಸುತ ಹಿಗ್ಗುತಿರು ೧೨-೧

ಚರಣಗಳೊಳಿಹ ನಾಡಿಗಳು ಹ
ನ್ನೆರಡು ಸಾವಿರ ಮಧ್ಯ ದೇಹದೊ
ಳಿರುತಿಹವು ಹದಿನಾಲ್ಕು ಬಾಹುಗಳೊಳಗೆ ಈರೆರದು
ಶಿರದೊಳಾರು ಸಾಹಸ್ರ ಚಿಂತಿಸಿ
ಇರುಳು ಹಗಲಭಿಮಾನಿ ದಿವಿಜರ
ನರಿತುಪಾಸನೆ ಗೈವವರಿಳೆಯೊಳು ಸ್ವಗವಾಸಿಗಳು ೧೨-೨

ಬ್ಇಹತಿ ನಾಮಕ ವಾಸುದೇವನು
ವಹಿಸಿ ಸ್ತ್ರೀಪುರುಷಗಳ ದೋಷವಿ
ರಹಿತ ಎಪ್ಪತ್ತೆರಡು ಸಾವಿರ ನಾಡಿಗಳೊಳಿದ್ದು
ದ್ರುಹಿಣ ಮೊದಲಾದಮರಗಣ ಸನ್
ಮಹಿತ ಸವ ಪ್ರಾಣಿಗಳ ಮಹ
ಮಹಿಮ ಸಂತೈಸುವನು ಸಂತತ ಪರಮ ಕರುಣಾಳು ೧೨-೩

ನೂರು ವರುಷಕೆ ದಿವಸ ಮೂವ
ತ್ತಾರು ಸಾವಿರವಹವು ನಾಡಿ ಶ
ರೀರದೊಳಗಿನಿತಿಹವು ಎಂದರಿತೊಂದುದಿವಸದಲಿ
ಸೂರಿಗಳ ಸತ್ಕರಿಸಿದವ ಪ್ರತಿ
ವಾರದಲಿ ದಂಪತಿಗಳಚನೆ
ತಾ ರಚಿಸಿದವ ಸತ್ಯ ಸಂಶಯವಿಲ್ಲವೆಂದೆಂದು ೧೨-೪

ಚತುರವಿಂಶತಿ ತತ್ವಗಳು ತ
ತ್ಪತಿಗಳೆನಿಸುವ ಬ್ರಹ್ಮಮುಖ ದೇ
ವತೆಗಳನುದಿನ ಪ್ರತಿಪ್ರತಿ ನಾಡಿಗಳೊಳಿರುತಿದ್ದು
ಚತುಅದಶ ಲೋಕದೊಳು ಜೀವ
ಪ್ರತತಿಗಳ ಸಂರಇಸುವ ಶಾ
ಶ್ವತನ ತತತ್ಸ್ಥಾನದಲಿ ನೋಡುತಲೆ ಮೋದಿಪರು ೧೨-೫

ಸತ್ಯ ಸಂಕಲ್ಪನು ಸದಾ ಎ
ಪ್ಪತ್ತೆರಡು ಸಾಹಸ್ರದೊಳು ಮೂ
ವತ್ತು ನಾಲಕು ಲಅ ದೈವತ್ತಾರು ಸಾಹಸ್ರ
ಚಿತ್ಪ್ರಕ್ಇತಿ ಒಡಗೂಡಿ ಪರಮ ಸು
ನಿತ್ಯ ಮಂಗಳ ಮೂತಿ ಭಕ್ತರ
ತೆತ್ತಿಗನು ತಾನಾಗಿ ಸವತ್ರದಲಿ ಸಂತೈಪ ೧೨-೬

ಮಣಿಗಳೊಳಗಿಹ ಸೂತ್ರದಂದಿ
ಪ್ರಣವಪ್ರತಿಪಾದ್ಯನು ಸವಚೇತನ
ಗಣದೊಳಿದ್ದವನವರತ ಸಂತೈಸುವನು ತನ್ನವರ
ಪ್ರಣತ ಕಾಮದ ಭಕ್ತ ಚಿಂತಾ
ಮಣಿ ಚಿದಾನಂದೈಕ ದೇಹನು
ಅಣು ಮಹದ್ಗತನಲ್ಪರೋಪಾದಿಯಲಿ ನೆಲೆಸಿಪ್ಪ ೧೨-೭

ಈ ಸುಷುಮ್ನಾದ್ಯಖಿಳ ನಾದೀ
ಕೋಶ ನಾಭಿಮೂಲದಲಿ ವ್ಇಷ
ಣಾಸನದ ಮಧ್ಯದಲಿ ಇಪ್ಪದು ತುಂದಿನಾಮದಲಿ
ಆ ಸರೋಜಾಸನ ಮುಖರು ಮೂ
ಲೇಶನಾನಂದಾದಿ ಸುಗುಣೋ

www.yousigma.com

ಪಾಸನೆಯ ಗೈವುತಲಿ ದೇಹದೊಳಗೆ ಇರುತಿಹರು ೧೨-೮

ಸೂರಿಗಳು ಚಿತ್ತೈಸುವದು ಭಾ
ಗೀರಥಿಯೆ ಮೊದಲಾದ ತೀಥಗ
ಳೀರಧಿಕ ಎಪ್ಪತ್ತು ಸಾವಿರ ನಾಡಿಯೊಳಗಿಹವು
ಈ ರಹಸ್ಯವನಲ್ಪ ಜನರಿಗೆ
ತೋರಿ ಪೇಳದೆ ನಾಡಿ ನದಿಯೊಳು
ಧೀರರನುದಿನ ಮಜ್ಜನವ ಮಾಡುತಲೆ ಸುಖಿಸುವರು ೧೨-೯

ತಿಳಿವುದೀ ದೇಹದೊಳಗಿಹ ಎಡ
ಬಲದ ನಾಡಿಗಳೊಳಗೆ ದಿವಿಜರು
ಜಲಜ ಸಂಭವ ವಾಯು ವಾಣ್ಯಾದಿಗಳು ಬಲದಲ್ಲಿ
ಎಲರುಣಿಗ ವಿಹಗೇಂದ್ರ ಚಳಿವೆ
ಟ್ಟಳಿಯ ಷಣ್ಮಹಿಷಿಯರು ವಾರುಣಿ
ಕುಲಿಶಧರ ಕಾಮಾದಿಗಳು ಎಡಭಾಗದೊಳಗಿಹರು ೧೨-೧೦

ಇಕ್ಕೆಲದೊಳಿಹ ನಾಡಿಯೊಳು ದೇ
ವಕ್ಕಳಿಂದೊಡನಾಡುತಲಿ ಪೊಂ
ಬಕ್ಕಿದೇರನು ಜೀವರಧಿಕಾರಾನುಸಾರದಲಿ
ತಕ್ಕ ಸಾಧನವ ಮಾಡಿ ಮಾಡಿಸು

ತಕ್ಕರದಿ ಸಂತೈಪ ಭಕ್ತರ

ದಕ್ಕಗೊದನಸುರಗೆ ಸತ್ಪುಣ್ಯಗಳನಪಹರಿಪ ೧೨-೧೧

ತುಂದಿವಿಡಿದಾ ಶಿರದ ಪರಿಯಂ

ತೊಂದೆ ವ್ಯಾಪಿಸಿ ಇಹುದು ತಾವರೆ

ಕಂದನಿಹನದರೊಳಗೆ ಇದಕೀರ್ರೈದು ಶಾಖೆಗಳು

ಒಂದಧಿಕ ದಶಕರಣಗಲು ಸಂ

ಬಂಧಗೈದಿಹವಲ್ಲಿ ರವಿ ಶಶಿ

ಸಿಂಧು ನಾಸತ್ಯಾದಿಗಳು ನೆಲೆಗೊಂಡಿಹರು ಸತತ ೧೨-೧೨

ಪೊಕ್ಕಳಡಿವಿಡಿದೊಂದೆ ನಾಡಿಯು

ಸುಕ್ಕದಲೆ ಧಾರಾಳ ರೂಪದಿ

ಸಿಕ್ಕಿಹುದು ನಡು ದೇಹದೊಳಗೆ ಸುಷುಮ್ನ ನಾಮದಲಿ

ರಕ್ಕಸರನೊಳಪೊಗಗೊಡದೆ ದಶ

ದಿಕ್ಕಿನೊಳಗೆ ಸಮೀರ ದೇವನು

ಲೆಕ್ಕಿಸದೆ ಮತ್ತೊಬ್ಬರನು ಸಂಚರಿಪ ದೇಹದೊಳು ೧೨-೧೩

ಇನಿತು ನಾಡೀಶಾಖೆಗಳು ಈ

ತನುವಿನೊಳಗಿಹವೆಂದು ಏಕಾ-

ತ್ಮನು ದ್ವಿಸಪ್ತಿ ಸಾವಿರಾತ್ಮಕನಾಗಿ ನಾಡಿಯೊಳು

www.yousigma.com

ವನಿತೆಯಿಂದೊಡಗೂಡಿ ನಾರಾ
ಯಣ ದಿವಾರಾತ್ರಿಯೊಳಗೀ ಪರಿ
ವನಜಜಾಂಡದೊಳಖಿಳ ಜೀವರೊಳಿದ್ದು ಮೋಹಿಸುವ ೧೨-೧೪

ದಿನ ದಿನದಿ ವಧಿಸುವ ಕುಮುದಾ
ಪ್ತನ ಮಯೂಖದ ಸೊಬಗ ಗತ ಲೋ
ಚನ ವಿಲೋಕಿಸಿ ಮೋದಬಡ ಬಲ್ಲನೆ ನಿರಂತರದಿ
ಕುನರಗೀ ಸುಕಥಾಮ್ಇತದ ಭೋ
ಜನದ ಸುಖ ದೊರಕುವುದೆ ಲಕುಮೀ
ಮನೋಹರನ ಸದ್ಗುಣವ ಕೀತಿಪ ಭಕುತಗಲ್ಲದಲೆ ೧೨-೧೫

ಈ ತನುವಿನೊಳಗಿಹವು ಓತ
ಪ್ರೋತರೂಪದಿ ನಾಡಿಗಳು ಪುರು
ಹೂತ ಮುಖರಲ್ಲಿಹರು ತಮ್ಮಿಂದಧಿಕರೊಡಗೂಡಿ
ಭೀತಿಗೊಳಿಸುತ ದಾನವರ ಸಂ
ಘಾತನಾಮಕ ಹರಿಯ ಗುಣ ಸಂ
ಪ್ರೀತಿಯಲಿ ಸದುಪಾಸನೆಯ ಗೈವುತಲೆ ಮೋದಿಪರು ೧೨-೧೬

ಜಲಟ ಕುಕ್ಕುಟ ಖೇಟ ಜೀವರ
ಕಳೇವರಗಳೊಳಗಿದ್ದು ಕಾಣಿಸಿ

www.yousigma.com

ಕೊಳದೆ ತತ್ತದ್ರೂಪ ತನ್ನಾಮದಲಿ ಕರೆಸುತಲಿ

ಜಲರುಹೇಅಣ ವಿವಿಧ ಕಮಂ

ಗಳ ನಿರಂತರ ಮಾಡಿ ಮಾಡಿಸಿ ತ

ತ್ಫಲಗುಳುಣ್ಣದೆ ಸಂಚರಿಸುವನು ನಿತ್ಯ ಸುಖಪೂಣ ೧೨-೧೭

ತಿಳಿದುಪಾಸನೆಗೈವುತೀ ಪರಿ

ಮಲಿನನಂತಿರು ದುಜನರ ಕಂ

ಗಳಿಗೆ ಗೋಚರಿಸದೆ ವಿಪಶ್ಚಿತರೊಡನೆ ಗವಿಸದೆ

ಮಳೆ ಬಿಸಿಲು ಹಸಿ ತ್ಇಷೆ ಜಯಾಪಜಯ

ಖಳರ ನಿಂದಾನಿಂದೆ ಭಯಗಳಿ

ಗಳುಕದಲೆ ಮದ್ದಾನೆಯಂದದಿ ಚರಿಸು ಧರೆಯೊಳಗೆ ೧೨-೧೮

ಕಾನನ ಗ್ರಾಮಸ್ಥ ಸವ

ಪ್ರಾಣಿಗಳು ಪ್ರತಿದಿವಸದಲಿ ಏ

ನೇನು ಮಾಡುವ ಕಮಗಳು ಹರಿಪೂಜೆಯೆಂದರಿದು

ಧೇನಿಸುತ ಸದ್ಭಕ್ತಿಯಲಿ

ಪವಮಾನಮುಖ ದೇವಾಂತರಾತ್ಮಕ

ಶ್ರೀನಿವಾಸನಿಗಪಿಸುತ ಮೋದಿಸುತ ನಲಿಯುತಿರು ೧೨-೧೯

ನೋಕನೀಯನು ಲೋಕದೊಳು ಶುನಿ

ಸೂಕರಾದಿಗಳೊಳಗೆ ನೆಲೆಸಿ
ದ್ದೇಕಮೇವಾದ್ವಿತೀಯ ಬಹುರೂಪಾವ್ಹಯಗಳಿಂದ
ತಾ ಕರೆಸುತೊಳಗಿದ್ದು ತಿಳಿಸದೆ
ಶ್ರೀ ಕಮಲಭವ ಮುಖ್ಯ ಸಕಲ ದಿ
ವೌಕಸಗಣಾರಾಧ್ಯ ಕೈಕೊಂಡನುದಿನದಿ ಪೊರೆವ ೧೨-೨೦

ಇನಿತುಪಾಸನೆ ಗೈವುತಿಹ ಸ
ಜ್ಜನರು ಸಂಸಾರದಲಿ ಪ್ರತಿ ಪ್ರತಿ
ದಿನಗಳಲಿ ಏನೇನು ಮಾಡುವುದೆಲ್ಲ ಹರಿಪೂಜೆ
ಎನಿಸಿಕೊಂಬುವು ಸತ್ಯವೀ ಮಾ
ತಿನಲಿ ಸಂಶಯ ಬಡುವ ನರನ
ಲ್ಪನು ಸುನಿಶ್ಚಯ ಬಾಹ್ಯ ಕಮವ ಮಾಡಿ ಫಲವೇನು ೧೨-೨೧

ಭೋಗ್ಯ ಭೋಕ್ತ್ಇಗಳೊಳಗೆ ಹರಿ ತಾ
ಭೋಗ್ಯ ಭೊಕ್ತನು ಎನಿಸಿ ಯೋಗ್ಯಾ
ಯೋಗ್ಯ ರಸಗಳ ದೇವದಾನವಗಣಕೆ ಉಣಿಸುವನು
ಭಾಗ್ಯನಿಧಿ ಭಕ್ತರಿಗೆ ಸದ್ವೈ
ರಾಗ್ಯ ಭಕ್ತಿ ಜ್~ನಾನವೀವಾ
ಯೋಗ್ಯರಿಗೆ ದ್ವೇಷಾದಿಗಳ ತನ್ನಲ್ಲಿ ಕೊಡುತಿಪ್ಪ ೧೨-೨೨

ಈ ಚತುದಶ ಭುವನದೊಳಗೆ ಚ
ರಾಚರಾತ್ಮಕ ಜೀವರಲ್ಲಿ ವಿ
ರೋಚನಾತ್ಮಜ ವಂಚಕನು ನೆಲೆಸಿದ್ದು ದಿನ ದಿನದಿ
ಯಾಚಕನು ಎಂದೆನಿಸಿಕೊಂಬ ಮ
ರೀಚಿದಮನ ಸುಹಂಸರೂಪಿ ನಿ
ಷೇಚಕಾವ್ಹಯನಾಗಿ ಜನರಭಿಲಾಷೆ ಪೂರೈಪ ೧೨-೧೩

ಅನ್ನದನ್ನಾದನ್ನಮಯ ಸ್ವಯ
ಮನ್ನ ಬ್ರಹ್ಮಾದ್ಯಖಿಳ ಚೇತನ
ಕನ್ನ ಕಲ್ಪಕನಾಹನನಿರುದ್ಧಾದಿ ರೂಪಾದಲಿ
ಅನ್ಯರನಪೇಇಸದೆ ಗುಣಕಾ
ರುಣ್ಯ ಸಾಗರ ಸ್ಇಷ್ಟಿಸುವನು ಹಿ
ರಣ್ಯಗಭನೊಳಿದ್ದು ಪಾಲಿಸುವನು ಜಗತ್ರಯವ ೧೨-೧೪

ತ್ರಿಪದ ತ್ರಿದಶಾಧ್ಯಅ ತ್ರಿಸ್ಥ
ತ್ರಿಪಥಗಾಮಿನಿಪಿತ ತ್ರಿವಿಕ್ರಮ
ಕ್ಇಪಣವತ್ಸಲ ಕುವಲಯದಳ ಶ್ಯಾಮ ನಿಸ್ಸೀಮ
ಅಪರಿಮಿತ ಚಿತ್ಸುಖ ಗುಣಾತ್ಮಕ
ವಪುಷ ವೈಕುಂಠಾದಿ ಲೋಕಾ
ಧಿಪ ತ್ರಯೀಮಯ ತನ್ನವರ ನಿಷ್ಕಾಪಟದಿಂ ಪೊರೆವ ೧೨-೧೫

ಲವಣ ಮಿಶ್ರಿತ ಜಲವು ತೋಪುದು
ಲವಣ ದೋಪಾಯಲಿ ಜಿಃವೆಗೆ
ವಿವರಗೈಸಲು ಶಖ್ಯವಾಗುವುದೇನೋ ನೋಳ್ಪರಿಗೆ
ಶ್ವವಶ ವ್ಯಾಪೀ ಎನಿಸಿ ಲಮೀ
ಧವ ಚರಾಚರದೊಳಗೆ ತುಂಬಿಹ
ನವಿದಿತನ ಸಾಕಲ್ಯ ಭಲ್ಲವರಾರು ಸುರರೊಳಗೆ ೧೨-೧೬

ವ್ಯಾಪ್ತನಂದದಿ ಸವಜೀವರೊ
ಳಿಪ್ಪ ಚಿನ್ಮಯ ಘೋರಭವ ಸಂ
ತಪ್ಯ ಮಾನರು ಭಜೀಸೆ ಭಕುತಿಯಳಿಂದಲಿಹಪರದಿ
ಪ್ರಾಪ್ಯನಾಗುವನವರವಗುಣಗ
ಳೊಪ್ಪುಗೊಂಬನು ಭಕ್ತ ವತ್ಸಲ
ತಪ್ಪಿಸುವ ಬಹುಜನ್ಮ ದೋಷಗಳವರಿಗನವರತ ೧೨-೧೭

ಹಲವು ಬಗೆಯಲಿ ಹರಿಯ ಮನದಲಿ
ಒಲಿಸಿ ನಿಲ್ಲಿಸಿ ಏನು ಮಾಡುವ
ಕೆಲಸಗಳು ಅವನಂಘ್ರಿಪೂಜೆಗಳೆಂದು ನೆನೆವುತಿರು
ಹಲಧರಾನುಜ ತಾನೇ ಸವ
ಸ್ಥಳಗಳಲಿ ನೆಲಿಸಿದ್ದು ನಿಶ್ಚಂ

ಚಲ ಭಕುತಿ ಸುಜ್~ನಾನ ಭಾಗ್ಯವ ಕೊಟ್ಟು ಸಂತೈಪ ೧೨-೧೮

ದೋಷಗಂಧವಿದೂರ ನಾನಾ
ವೇಷಧಾರಕ ಈ ಜಗತ್ರಯ
ಪೋಷಕ ಪುರಾತನ ಪುರುಷ ಪುರುಹೂತ ಮುಖವಿನುತ
ಶೇಷವರ ಪರಿಯಂಕ ಶಯನ ವಿ
ಭೀಷಣ ಪ್ರಿಯ ವಿಜಯಸಖ ಸಂ
ತೋಷಬಡಿಸುವ ಸುಜನರಿಷ್ಟಾರ್ಥಗಳ ಪೂರೈಸಿ ೧೨-೧೯

ಶ್ರೀಮಹೀಸೇವಿತ ಪದಾಂಬುಜ
ಭೂಮ ಸದ್ಭಕ್ತೈಕಲಭ್ಯ ಪಿ
ತಾಮಹಾದ್ಯಮರಾಸುರಾಚಿತ ಪಾದ ಪಂಕೇಜ
ವಾಮ ವಾಮನ ರಾಮ ಸಂಸಾ
ರಾಮಯೌಷಧ ಹೇ ಮಮಕುಲ
ಸ್ವಾಮಿ ಸಂತೈಸೆನಲು ಬಂದೊದಗುವನು ಕರುಣಾಳು ೧೨-೨೦

ದನುಜ ದಿವಿಜರೊಳಿದ್ದು ಅವರವ
ರನುಸರಿಸಿ ಕಮಗಳ ಮಾಳ್ಪನು
ಜನನಮರಣಾದ್ಯಖಿಳದೋಷವಿದೂರ ಎಮ್ಮೊಡನೆ
ಜನಿಸುವನು ಜೀವಿಸುವ ಸಂರ

ಅಣೆಯ ಮಾಡುವನೆಲ್ಲ ಕಾಲದಿ
ಧನವ ಕಾಯಿದಿಹ ಸಪನಂತನಿಮಿತ್ತ ಬಾಂಧವನು ೧೨-೨೧

ಬಿಸರುಹಾಪ್ತಾಗಸದಿ ತಾನುದ
ಯಿಸಲು ವ್ಇಅಂಗಳ ನೆಳಲು ಪಸ
ರಿಸುವುವಿಳೆಯೊಳು ಅಸ್ತಮಿಸಲ್ಲಲ್ಲೇ ಲೀನಿಪವು
ಶ್ವಸನ ಮುಖ್ಯಮರಾಂತರಾತ್ಮಕ
ನೊಶದೊಳಿರುತಿಪ್ಪವು ಈ ಜಗತ್ರಯ
ಬಸಿರೊಳಿಂಬಿಟ್ಟೆಲ್ಲ ಕಮವ ತೋಪ ನೋಳ್ಪರಿಗೆ ೧೨-೨೨

ತ್ರಿಭುವನೈಕಾರಾಧ್ಯ ಲಮೀ
ಸುಭುಜಯುಗಳಾಲಿಂಗಿತಾಂಗ
ಸ್ವಭು ಸುಖಾತ್ಮ ಸುವಣವಣ ಸುಪಣವರವಹನ
ಅಭಯದಾನಂತಾಕ ಶಶಿಸ
ನ್ನಿಭ ನಿರಂಜನ ನಿತ್ಯದಲಿ ತನ
ಗಭಿನಮಿಸುವರಿಗೀವ ಸವಾಥಗಳ ತಡೆಯದಲೆ ೧೨-೨೩

ಕವಿಗಳಿಂದಲಿ ತಿಳಿದು ಪ್ರಾತಃ
ಸವನ ಮಧ್ಯಂದಿನವು ಸಾಯಮ
ಸವನಗಳು ವಸು ಇದ್ರರಾದಿತ್ಯರೊಳು ರಾಜಿಸುವ

ಪವನನೊಳು ಕ್ಇತಿ ಜಯ ಸುಮಾಯಾ
ಧವನ ಮೂತಿತ್ರಯವ ಚಿಂತಿಸಿ
ದಿವಸವೆಂಬಾಹುತಿಗಳಿಂದಚಿಸುತ ಸುಖಿಸುತಿರು ೧೨-೩೪

ಚತುರವಿಂಶತ್ಯಬ್ದ ವಸುದೇ
ವತೆಗಳೊಳು ಪ್ರದ್ಯುಮ್ನನಿಪ್ಪನು
ಚತುಶ್ಚತ್ವಾರಿಂಶತಿಗಳಲಿ ಸಂಕಷಣಾಖ್ಯ
ಹುತವಹಾಲನೊಳಿಹನು ಮಾಯಾ
ಪತಿಯು ಹದಿನಾರಧಿಕ ದ್ವಾತ್ರಿಂ
ಶತಿ ವರುಷಗಳಲಿಪ್ಪನಾದಿತ್ಯನೊಳು ಸಿತಕಾಯ ೧೨-೩೫

ಷೊದಶೋತ್ತರಶತ ವರುಷದಲಿ
ಶೋಡಶೋತ್ತರಶತ ಸುರೂಪದಿ
ಕ್ರೀಡಿಸುವ ವಸುಇದ್ರಾದಿತ್ಯರೊಳು ಸತಿಸಹಿತ
ವ್ರೀಡವಿಲ್ಲದೆ ಭಜಿಪ ಭಕ್ತರ
ಪೀಡಿಸುವ ದುರಿತೌಘಗಳ ದೂ
ರೋಡಿಸುತ ಬಳಿಯಲಿ ಬಿಡದೆ ನೆಲಸಿಪ್ಪ ಭಯಹಾರಿ ೧೨-೩೬

ಮೂರಧಿಕ ಎಂಭತ್ತು ಸಹಸ್ರೈ
ನೂರು ಇಪ್ಪತ್ತೆನಿಪ ರೂಪದಿ

ತೋರುತಿಪ್ಪ ದಿವಾನಿಶಾಧಿಪರೊಳಗೆ ನಿತ್ಯದಲಿ
ಭಾರತೀ ಪ್ರಾಣರೊಳಗಿದ್ದು ನಿ
ವಾರಿಸುತ ಭಕ್ತರ ದುರಿತ ಹಿಂ
ಕಾರ ನಿಧನ ಪ್ರಥಮ ರೂಪದಿ ಪಿತ್ಌಗಳನೆ ಪೊರೆವ ೧೨-೩೭

ಬುದ್ಧಿ ಪೂವಕ ಉತ್ತಮೋತ್ತಮ
ಶುದ್ಧ ಊಣಾಂಬರವ ಪಂಕದೊ
ಳದಿ ತೆಗೆಯಲು ಲೇಪವಾಗುವುದೇ ಪರೀಌಸಲು
ಪದ್ಮನಾಭನು ಸವಜೀವರೊ
ಳಿದ್ದರೇನು ಗುಣತ್ರಯಗಳಿಂ
ಬದ್ಧನಾಗುವನೇನೋ ನಿತ್ಯ ಸುಖಾತ್ಮ ಚಿನ್ಮಯನು ೧೨-೩೮

ಸಕಲ ದೋಷವಿದುರ ಶಶಿ ಪಾ
ವಕ ಸಹಸ್ರಾನಂತ ಸೂರ್ಯ
ಪ್ರಕರ ಸನ್ನಿಭಗಾತ್ರ ಲಕುಮೀಕಳತ್ರ ಸುರಮಿತ್ರ
ವಿಖನಸಾಂಡದೊಳಿಪ್ಪ ಬ್ರಹ್ಮಾ
ದ್ಯಖಿಳ ಚೇತನಗಣಕೇ ತಾನೇ
ಸಖನೆನಿಸಿಕೊಂಡಕುಟಿಲಾತ್ಮಕನಿಪ್ಪನವರಂತೆ ೧೨-೩೯

ದೇಶಭೇದಗಳಲ್ಲಿ ಇಪ್ಪಾ

ಕಾಶದೋಪಾದಿಯಲಿ ಚೇತನ
ರಾಶಿಯೊಳು ನೆಲೆಸಿಪ್ಪನವ್ಯವಧಾನದಲಿ ನಿರುತ
ಶ್ರೀಸಹಿತ ಸವತ್ರ ನಿರವಾ
ಕಾಶ ಕೊಡುವಂದದಲಿ ಕೊಡುತ ನಿ
ರಾಶೆಯಲಿ ಸವಾಂತರಾತ್ಮಕ ಶೋಭಿಸುವ ಸುಖದಾ ೧೨-೪೦

ಶ್ರೀವಿರೀಂಚಾದ್ಯಮರಗಣ ಸಂ
ಸೇವಿತಾಂಘ್ರಿ ಸರೋಜ ಈ ಜಡ
ಜೀವರಾಶಿಗಳೊಳಹೊರಗೆ ನೆಲಿಸಿದ್ದು ನಿತ್ಯದಲಿ
ಸಾವಕಾಶನು ಎನಿಸಿ ತನ್ನ ಕ
ಳೇವರದೊಳಿಮ್ಬಿಟ್ಟು ಸಲಹುವ
ದೇವ ದೇವಕಿರಮಣ ದಾನವಹರಣ ಜಿತಮರಣ ೧೨-೪೧

ಮಾಸ ಒಂದಕೆ ಪ್ರತಿದಿವಸದಲಿ
ಶ್ವಾಸಗಳು ಅಹವಷ್ಟ ಚತ್ವಾ
ರಿಂಶತಿ ಸಹಸ್ರಾಧಿಕಾರು ಸುಲಕ್ಷ ಸಂಖ್ಯೇಯಲಿ
ಹಂಸ ನಾಮಕ ಹರಿಯ ಷೋಡಶ
ಈ ಶತಾಬ್ದದಿ ಭಜಿಸೆ ಒಲಿವ ದ
ಯಾ ಸಮುದ್ರ ಕುಚೇಲಗೋಲಿದಂದದಲಿ ದಿನದಿನದಿ ೧೨-೪೨

ಸ್ಥೂಲದೇಹದೊಳಿದ್ದು ವರುಷಕೆ
ಏಳಧಿಕ ಎಪ್ಪತ್ತು ಲಅದ
ಮೇಲೆ ಎಪ್ಪತ್ತಾರು ಸಾವಿರ ಶ್ವಾಸ ಜಪಗಳನು
ಗಾಳಿದೇವನು ಕರುಣದಲಿ ಈ
ರೇಳು ಲೋಕದೊಳುಳ್ಳ ಚೇತನ
ಜಾಲದೊಳು ಮಾಡುವನು ತ್ರಿಜಗದ್ವ್ಯಾಪ್ತ ಪರಮಾಪ್ತ ೧೨-೪೩

ಈರೆರದು ದೇಹಗಳೊಳಿದ್ದು ಸ
ಮೀರದೇವನು ಶ್ವಾಸ ಜಪ ನಾ
ನೂರಧಿಕವಾಗಿಪ್ಪ ಎಂಭತ್ತಾರು ಸಾಹಸ್ರ
ತಾ ರಚಿಸುವನು ದಿವಸ ಒಂದಕೆ
ಮೂರುವಿಧ ಜೀವರೊಳಗಿದ್ದು ಖ
ರಾರಿ ಕರುಣಾಬಲವಿದೆಂತುಟೋ ಪವನರಾಯನೊಳು ೧೨-೪೪

ಶ್ರೀಧವ ಜಗನ್ನಾಥವಿಠಲನು
ತಾ ದಯದಿ ವದನದೊಳು ನುಡಿದೋ
ಪಾದಿಯಲಿ ನಾ ನುಡಿದೆನಲ್ಲದೆ ಕೇಳಿ ಬುಧಜನರು
ಸಾಧುಲಿಂಗ ಪ್ರದರ್ಶಕರು ನಿ
ಷೇಧಿಸಿದರೇನಹುದು ಎನ್ನಪ
ರಾಧವೇನಿದರೊಳಗೆ ಪೇಳ್ವುದು ತಿಳಿದ ಕೋವಿದರು ೧೨-೪೫